ಬೀದರ್ ಜಿಲ್ಲೆಯಲ್ಲಿ ಹೊಸ ಪೊಲೀಸ್ ಠಾಣೆಗಳು

888 (1115) ಶ್ರೀ ಪ್ರಭು ಚೌವ್ಹಾಣ್ (ಔರಾದ್) : ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ 208 ರಿಂದ ಇಲ್ಲಿಯವರೆಗೂ ಎಷ್ಟು ಹೊಸ ಪೊಲೀಸ್ ಠಾಣೆಗಳನ್ನು ಹಾಗೂ ಹೊರ ಠಾಣೆಗಳನ್ನು ಪ್ರಾರಂಭಿಸಲಾಗಿದೆ. (ತಾಲ್ಲೂಕುವಾರು ವಿವರ ನೀಡುವುದು);

ಆ) ಪ್ರಾರಂಭಿಸಲ್ಪಟ್ಟ ಹೊಸ ಪೊಲೀಸ್ ಠಾಣೆಗಳು ಹಾಗೂ ಹೊರ ಠಾಣೆಗಳಲ್ಲಿ ಸಿಬ್ಬಂದಿಗಳನ್ನು ನೇಮಕ ಮಾಡಲಾಗಿದೆಯೇ; ಇಲ್ಲವಾದಲ್ಲಿ, ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು (ವಿವರ ಒದಗಿಸುವುದು);

ಇ) ಹಾಲಿ ಜಿಲ್ಲೆಯಾದ್ಯಂತ ಕೊರತೆಯಿರುವ ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಅವುಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಆರ್. ಅಶೋಕ (ಗೃಹ ಮತ್ತು ಸಾರಿಗೆ ಸಚಿವರು) :

ಅ) ಬೀದರ್ ಜಿಲ್ಲೆಯಲ್ಲಿ 2008 ರಿಂದ ಇಲ್ಲಿಯವರೆಗೆ ಈ ಕೆಳಕಂಡ 2 ಪೊಲೀಸ್ ಠಾಣೆಗಳನ್ನು ಸೃಜಿಸಲು ಸರ್ಕಾರ ಮಂಜೂರಾತಿ ನೀಡಿದೆ.

ಠಾಣೆ	ತಾಲ್ಲೂಕು	ಸರ್ಕಾರದ ಆದೇಶ ಸಂಖ್ಯೆ	ಪ್ರಾರಂಭಿಸಿದ ದಿನಾಂಕ
ಹೊಕ್ರಾಣ ಪೊಲೀಸ್ ಠಾಣೆ	ಔರಾದ (ಬಿ)	ಹೆಚ್.ಡಿ/207/ಪಿಓಪಿ/2008, ದಿನಾಂಕ: 10–2–2010	21–12–2010
ಹುಮನಾಬಾದ್	ಹುಮನಾಬಾದ್	ಹೆಚ್.ಡಿ/207/ಪಿಓಪಿ/2008, ದಿನಾಂಕ: 10–2–2010	11–11–2010

ಆ) ಹೊಸದಾಗಿ ಪ್ರಾರಂಭವಾದ ಪೊಲೀಸ್ ಠಾಣೆಗಳ ಮಂಜೂರಾತಿ ಬಲ ಹಾಗೂ ವಾಸ್ತವ ಬಲವನ್ನು ಕೆಳಕಂಡಂತೆ ನೀಡಲಾಗಿದೆ.

ಹುಮನಾಬಾದ್ ಸಂಚಾರ ಪೊಲೀಸ್ ಠಾಣೆ

	ಪಿಎಸ್ಐ	ಎಎಸ್ಐ	ಹೆಚ್ಸಿ	ಮಹೆಚ್ಸಿ	ಪಿಸಿ	ಮಪಿಸಿ	ಎಪಿಸಿ (ಡಿ)	ಒಟ್ಟು
ಮಂಜೂರಾತಿ ಬಲ	2	2	10	2	31	4	1	52
ವಾಸ್ತವ ಬಲ	2	2	10	2	31	4	1	52

ಹೊಕ್ರಾಣ ಪೊಲೀಸ್ ಠಾಣೆ

	ಪಿಎಸ್ಐ	ಎಎಸ್ಐ	ಹೆಚ್ಸಿ	ಮಹೆಚ್ಸಿ	ಪಿಸಿ	ಮಪಿಸಿ	ಎಪಿಸಿ (ಡಿ)	ಒಟ್ಟು
ಮಂಜೂರಾತಿ ಬಲ	2	2	9	1	20	3	–	37
ವಾಸ್ತವ ಬಲ	2	2	9	1	20	3	–	37

ಇ) ಜಿಲ್ಲೆಯಲ್ಲಿ 7–ಪಿ.ಎಸ್.ಐ. ಹಾಗೂ 58–ಸಿಪಿಸಿ / ಮಪಿಸಿ ಹುದ್ದೆಗಳು ಖಾಲಿಯಿದ್ದು, ಪ್ರಸ್ತುತ ಈ ಹುದ್ದೆಗಳಲ್ಲಿ ಸಿಪಿಸಿ/ಮಪಿಸಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಈಗಾಗಲೇ ಕ್ರಮ ಜರುಗಿಸಲಾಗಿದ್ದು, ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಪತ್ರಗಳನ್ನು ರವಾನಿಸಲಾಗಿದೆ.

ಬೀದರ್ ಜಿಲ್ಲೆಯಲ್ಲಿ ಸಾರಿಗೆ ಇಲಾಖೆಯ ಯೋಜನೆಗಳು

889 (1116) ಶ್ರೀ ಪ್ರಭು ಚೌವ್ಹಾಣ್ (ಔರಾದ್) : ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಸಾರಿಗೆ ಇಲಾಖೆಯ ವತಿಯಿಂದ ಅನುಷ್ಠಾನ ಮಾಡಲು ಉದ್ದೇಶಿಸಿರುವ ಯೋಜನೆಗಳು ಎಷ್ಟು; ಅವುಗಳ ರೂಪರೇಷೆಗಳೇನು (ತಾಲ್ಲೂಕುವಾರು ವಿವರ ನೀಡುವುದು);

ಆ) ಜಿಲ್ಲೆಯಲ್ಲಿ ಹಲವಾರು ಗ್ರಾಮೀಣ ಪ್ರದೇಶಗಳಿಗೆ ಸಾರಿಗೆ ಸಂಸ್ಥೆಯ ವಾಹನಗಳು ಸಂಚರಿಸದೇ ಇರುವುದರಿಂದ ಗ್ರಾಮೀಣ ಜನತೆಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಸದರಿ ತೊಂದರೆಯನ್ನು ಪರಿಹರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು (ವಿವರ ಒದಗಿಸುವುದು)?